SWAMY VIVEKANANDA VIDYA SAMSTHE (R)

# KUMADVATHI COLLEGE OF EDUCATION

Aided, Permanently Affiliated to Kuvempu University, Recognised by NCTE & UGC Act 2(f), Section 12(B) & NAAC Accredited with B Grade

Shivamogga Road **Shikaripura** – 577427 Shivamogga Dist
Email: kumadvathibed@gmail.com Website: www.kumadvathibed.in

# FUTURE

## MAGAZINE 2023

Issue: 102. February 2023

## KUMADVATHI COLLEGE OF EDUCATION
## ALUMNI ASSOCIATION (R)

Reg.no.: DRSH/SOR/37/2020-2021
Viveka Nagara, Shikaripura- 577427
Shivamogga District, Karnataka
Phone: 08187-222383, 222067
Email: kcealumni96@gmail.com
Website: www.kumadvathibed.in

## THE MANAGEMENT

Kumadvathi College of Education is managed by Swamy Vivekananda Vidya Samsthe (R) which several educational Institutions Viz, P.G Centre, First Grade College, P.U Science & Commerce College, High School, Primary Schools, Nursing School and Hostels, many social welfare and educational activities since 25 years. This year institution is also celebrating Silver Jubilee on the eve of completing 25Year of quality service in providing education and Societal service specially in rural area. The mission of the trust is to “DO BEST TO DO THE BEST”.

Sri B. S. YEDDIYURAPPA, Founder of SVVS A true educationist, Chief Minister of Karnataka State is the chief architect of this trust. Sri. B.Y. RAGHAVENDRA, Member of Parliament, Shivamogga Constituency and Secretary SVVS with his untired efforts has developed the institution in to great temple of knowledge. There are various educational institutions from primary to professional level catering to the educational needs of the deprived sections of the society.

## ABOUT THE COLLEGE

Kumadvathi College of Education is established in the year 1996 and receiving Grant in Aid from Government of Karnataka. It is permanently affiliated to Kuvempu University and recongnised by NCTE also under UGC – 2f & 12(B) and NAAC Accredited with ‘B’ Grade. It is housed in a well-equipped building as per the NCTE norms. It is situated in a 16 acres land adjacent to Shivamogga road, Shikaripura. The campus refreshes you with its scenic beauty, calm & quite environment, completely conducive for education. The college has a track record of providing good quality teacher education and gets almost 100% result and ranks every year.

## VISION – MISSION – VALUES

### Vision

“To educate the students to explore their potentials, do the best that they are capable of doing and become effective, humane, global teachers and useful citizens of the country”.

### Mission

- Transforming the hidden potentials of the students into realities.
- To enable the students to develop holistic personality with productive thinking.
- To enable the students to fulfill themselves with growth, happiness and satisfaction

### Values

- To encourage creativity, independent thinking and lifelong learning.
- To nurture and foster work, enthusiasm and exhibit diligence and sincerity.
- To provide education that is cognizant with changing demands of our society.
- To develop sincerity, responsibility and work culture.
- To provide the finest infrastructure, resources and services to enhance growth and development of every student.

# PÀªÀÄzÀ ²PÀë ªÀiÁºÀ«zÁå®AiÀÄ, ²ªÀÄÆUÀÎ¸ÀÜ ²PÁj¥ÀÄgÀ

## ¥ÀwæPÁï ªÀiÁ¸À ¥ÀæPÀluÉ

wÁUÀÄÜÄ: ಫೆಬ್ರುವರಿ                                        ¸ÀASÉå: 102

¥ÀwæPÁï ªÀiÁ¸À ¥ÀæPÀluÉAiÀÄ°è ¥ÀæPÀn¸ÀzÀ GzÉÆåUÀ ªÀiÁ»wUÀ¼À£ÀÄß ««zÀ ªÀiÁzsÀåªÀÄUÀ¼À ªÀÄÆ®PÀ ¸ÀAUÀæ»¹ ¥ÀæPÀn¸À¯ÁVzÉ ªÀiÁ¸À¥ÀwæPÉAiÀÄ°è ¥ÀæPÀn¸ÀzÀ ««zsÀ GzÉÆåUÀ ªÀiÁ»wUÀ¼É ¥ÀwæPÁï ªÀiÁ¸À ¥ÀæPÀluÉAiÀÄ ºÉÆuÉUÁgÀgÁVgÀÄvÀÛªÉ F ªÀiÁ¸À ¥ÀæPÀluÉAiÀÄ ªÀÄÄ¥ÀÄgÀÄzÀæt ªÀiÁrgÀÄªÀ PÀªÀÄzÀ ²PÀë ªÀiÁºÀ«zÁå®AiÀÄªÀÅ GzÉÆåUÀ PÀÄjvÀÄ ºÉZÀÑ£À ªÀiÁ»wAiÀÄ£ÀÄß ¤ÃqÀ®Ä ¥ÀæPÀn¸À¯ÁVzÉ

**ªÀiÁ»w ¸ÀAUÀæ»¹zÀ ««zsÀ ªÀiÁzsÀåªÀÄUÀ¼ÀÄ/ DPÀgÀUÀæAxÀUÀ¼ÀÄ**

1. **www.recruitapp.in/bangalore_dccb2023**
2. **www.shimul.coop**
3. **www.ssc.co.in**
4. **www.kpsc.kar.nic.in**
5. ¸zÁð¸Æwð, ¸A¥Ä I -18, ¸AaP-08, ಜನವರಿ – 2023, zÁgªÁq.

Swamy Vivekananda Vidya Samsthe (R), Shikaripura

# KUMADVATHI COLLEGE OF EDUCATION, SHIKARIPURA

Placement Index

Issue.102 Month : February

| SL. No | TITLE | P.NO |
|---|---|---|
| 1 | ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನೇಮಕಾತಿ (DCC) | 1-3 |
| 2 | ಶಿವಮೊಗ್ಗ ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಮಾಚೇನಹಳ್ಳಿ 194 ಹುದ್ದೆಗಳ ನೇಮಕಾತಿ | 4-5 |
| 3 | SSC Multi-Tasking Staff Recruitment | 6-8 |
| 4 | ಸಾಮಾನ್ಯ ಜ್ಞಾನ | 9-12 |

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ನಂ.2,(ಜಿ.ಎಂ.ಸಿ.ಬ್ಯಾಂಕ್ ಆವರಣ), ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18.
(Phone No.:080-29505301/29500301, E-mail – bdbrdccb@gmail.com)

ನಂ.ಬಿಡಿಸಿಸಿಬಿ:ಪ್ರ.ಕ.ಆಸಿ:ನೇಮಕಾತಿ: 3576 :2022-23 ದಿನಾಂಕ:27.01.2023

## ಪ್ರಕಟಣೆ

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು **ONLINE** ಮುಖಾಂತರ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ **http://recruitapp.in/bangalore_dccb2023** ನಲ್ಲಿ ನೀಡಿರುವ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೊರಿಯರ್ ಇತ್ಯಾದಿಗಳ ಮೂಲಕ ಕಳುಹಿಸಲು ಅವಕಾಶವಿರುವುದಿಲ್ಲ. ನೇಮಕಾತಿ ಮಾಡಲು ಉದ್ದೇಶಿಸಿರುವ ವಿವಿಧ ವೃಂದಗಳ ಒಟ್ಟು 96 ಹುದ್ದೆಗಳನ್ನು ಸರ್ಕಾರಿ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

**A) ಹುದ್ದೆಯ ಹೆಸರು : (ಕಿರಿಯ ಆಡಳಿತ ವರ್ಗ-I) ಶಾಖಾ ವ್ಯವಸ್ಥಾಪಕರು (Branch Managers) ಹುದ್ದೆಗಳು: ಒಟ್ಟು 4 (ನಾಲ್ಕು) ಹುದ್ದೆಗಳು.**

| ವರ್ಗ | ಸಾಮಾನ್ಯ ಅಭ್ಯರ್ಥಿ (ಇತರೆ) | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ತೃತೀಯ ಲಿಂಗ | ಒಟ್ಟು ಹುದ್ದೆಗಳು |
|---|---|---|---|---|---|---|---|---|---|
| ಸಾಮಾನ್ಯ | – | – | 1 | 1 | – | – | – | – | 2 |
| ಪರಿಶಿಷ್ಟ ಜಾತಿ | – | – | – | – | – | – | – | – | – |
| ಪರಿಶಿಷ್ಟ ಪಂಗಡ | – | – | – | – | – | – | – | – | – |
| ಪ್ರ.ವರ್ಗ-I | 1 | – | – | – | – | – | – | – | 1 |
| ಪ್ರ.ವರ್ಗ-IIA | 1 | – | – | – | – | – | – | – | 1 |
| ಪ್ರ.ವರ್ಗ-IIB | – | – | – | – | – | – | – | – | – |
| ಪ್ರ.ವರ್ಗ-IIIA | – | – | – | – | – | – | – | – | – |
| ಪ್ರ.ವರ್ಗ-IIIB | – | – | – | – | – | – | – | – | – |
| ಒಟ್ಟು | 2 | – | 1 | 1 | – | – | – | – | 4 |

**B) ಹುದ್ದೆಯ ಹೆಸರು : (ಗ್ರೂಪ್ ಬಿ-I) ಹಿರಿಯ ಸಹಾಯಕರು (Senior Assistants) ಹುದ್ದೆಗಳು: ಒಟ್ಟು 19 (ಹತ್ತೊಂಬತ್ತು) ಹುದ್ದೆಗಳು**

| ವರ್ಗ | ಸಾಮಾನ್ಯ ಅಭ್ಯರ್ಥಿ (ಇತರೆ) | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲ ಅಭ್ಯರ್ಥಿ | ಮಾಜಿ ಸೈನಿಕ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತ ಅಭ್ಯರ್ಥಿ | ತೃತೀಯ ಲಿಂಗ | ಒಟ್ಟು ಹುದ್ದೆಗಳು |
|---|---|---|---|---|---|---|---|---|---|
| ಸಾಮಾನ್ಯ | – | 3 | 3 | – | – | 1 | 1 | – | 8 |
| ಪರಿಶಿಷ್ಟ ಜಾತಿ | – | – | 1 | – | – | 1 | – | – | 2 |
| ಪರಿಶಿಷ್ಟ ಪಂಗಡ | 1 | 1 | – | – | – | – | – | – | 2 |
| ಪ್ರ.ವರ್ಗ-I | – | – | – | 1 | – | – | – | – | 1 |
| ಪ್ರ.ವರ್ಗ-IIA | 1 | 1 | 1 | – | – | – | – | – | 3 |
| ಪ್ರ.ವರ್ಗ-IIB | – | – | – | 1 | – | – | – | – | 1 |
| ಪ್ರ.ವರ್ಗ-IIIA | – | – | 1 | – | – | – | – | – | 1 |
| ಪ್ರ.ವರ್ಗ-IIIB | – | – | – | 1 | – | – | – | – | 1 |
| ಒಟ್ಟು | 2 | 5 | 6 | 3 | – | 2 | 1 | – | 19 |

**ಹುದ್ದೆಯ ಹೆಸರು: (ಕಿರಿಯ ಆಡಳಿತ ವರ್ಗ-I) ಶಾಖಾ ವ್ಯವಸ್ಥಾಪಕರು (Br.Managers) ಹುದ್ದೆಗಳು:**
ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಹಾಗೂ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು.

**ಹುದ್ದೆಯ ಹೆಸರು : (ಗ್ರೂಪ್ ಬಿ-I) ಹಿರಿಯ ಸಹಾಯಕರು (Senior Assistants) ಹುದ್ದೆಗಳು:**
ಮಾನ್ಯತೆ ಪಡೆದ ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಯಾವುದೇ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಹಾಗೂ ಅಪ್ಲಿಕೇಷನ್‌ನಲ್ಲಿ ಜ್ಞಾನ ಹೊಂದಿರಬೇಕು.

**ಹುದ್ದೆಯ ಹೆಸರು : (ಗ್ರೂಪ್ ಬಿ-I) ಶೀಘ್ರಲಿಪಿಗಾರರು (Stenographer) ಹುದ್ದೆಗಳು:**

i) ದ್ವಿತೀಯ ಪಿ.ಯು.ಸಿ.ಯಲ್ಲಿ ಅಥವಾ 3 ವರ್ಷಗಳ ಡಿಪ್ಲೋಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು.
ii) ಸೀನಿಯರ್ ಕನ್ನಡ ಮತ್ತು ಇಂಗ್ಲಿಷ್ ಶೀಘ್ರಲಿಪಿಯಲ್ಲಿ ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಟೈಪಿಂಗ್, ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು.
iii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

**ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಿರಿಯ ಸಹಾಯಕರು (Junior Assistants) ಹುದ್ದೆಗಳು:**
ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು, ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಮತ್ತು ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ ಜ್ಞಾನವಿರಬೇಕು.

**ಹುದ್ದೆಯ ಹೆಸರು : (ಗ್ರೂಪ್ ಬಿ-II) ಕಂಪ್ಯೂಟರ್ ಆಪರೇಟರ್ (Computer Operators) ಹುದ್ದೆಗಳು:**

i) ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅಥವಾ 3 ವರ್ಷಗಳ ಡಿಪ್ಲೋಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು.
ii) ಸೀನಿಯರ್ ಕನ್ನಡ ಮತ್ತು ಇಂಗ್ಲಿಷ್ ಟೈಪ್‌ರೈಟಿಂಗ್‌ನಲ್ಲಿ ಉತ್ತೀರ್ಣರಾಗಿದ್ದು, ಕಂಪ್ಯೂಟರ್ ಆಪರೇಷನ್ಸ್ ಮತ್ತು ಅಪ್ಲಿಕೇಷನ್ಸ್‌ನಲ್ಲಿ ಜ್ಞಾನವಿರಬೇಕು ಮತ್ತು
iii) ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

**ಹುದ್ದೆಯ ಹೆಸರು : (ಗ್ರೂಪ್ ಸಿ) ವಾಹನ ಚಾಲಕರು (Drivers) ಹುದ್ದೆಗಳು:**
ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. ಕಾನೂನಿನ್ವಯ ಲಘು ಮತ್ತು ಭಾರೀ ವಾಹನ ಚಾಲನೆ ಪರವಾನಿಗೆ ಹೊಂದಿರಬೇಕು.

**ಹುದ್ದೆಯ ಹೆಸರು : (ಗ್ರೂಪ್ ಸಿ) ನಾಲ್ಕನೇ ದರ್ಜೆ ನೌಕರರು (CLASS-IV) ಹುದ್ದೆಗಳು:**
ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು.

**Note** :-ಅಭ್ಯರ್ಥಿಯು **Photo Upload** ಗುಂಡಿಯನ್ನು ಒತ್ತಿ, ಅವರ **Application** ID ಮತ್ತು **Password** ಅನ್ನು ಬಳಸಿ ತಮ್ಮ ಸಹಿಯೊಂದಿಗಿನ ಭಾವಚಿತ್ರವನ್ನು ಅಪ್‌ಲೋಡ್ ಮಾಡಬಹುದು ಅಥವಾ ತಪ್ಪಾದಲ್ಲಿ ಅದನ್ನು ಬದಲಾಯಿಸಬಹುದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**ಹಂತ ೫:**-ಅರ್ಜಿಯ ಮುದ್ರಣವನ್ನು ಪಡೆಯಲು **Print Application** ಗುಂಡಿಯನ್ನು ಒತ್ತಿ, ಅನಂತ್ತರವೇ **Application Preview** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ **Download** ಮಾಡಿಕೊಳ್ಳತಕ್ಕದ್ದು. **BDCC BANK** ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು.

**ಹಂತ ೬:**-ನಂತರ ಅರ್ಜಿ ಶುಲ್ಕ ಮತ್ತು ಅನ್ವಯಿಸುವ ಸೇವಾ ಶುಲ್ಕವನ್ನು Payment Gateway ಲಿಂಕ್ ಬಳಸಿ ಪಾವತಿಸತಕ್ಕದ್ದು.

## Note :-

1. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:28.02.2023 ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.
3. ಅಭ್ಯರ್ಥಿಗಳು ತಮ್ಮ ಅರ್ಜಿ ಸ್ಥಿತಿಯನ್ನು ತಿಳಿಯಬೇಕಾದಲ್ಲಿ, ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ 7 ದಿನಗಳ ತರುವಾಯ ಬ್ಯಾಂಕಿನ ವೆಬ್‌ಸೈಟ್ **http://recruitapp.in/bangalore_dccb2023** ಲಿಂಕಿನಲ್ಲಿ ಮಾಹಿತಿಗಳನ್ನು ದಾಖಲಿಸಿ, ಅರ್ಜಿಯು ಸಿಂಧುವಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ನಿಮ್ಮ ಅರ್ಜಿಯ ಮಾಹಿತಿ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ದೊರೆಯದಿದ್ದಲ್ಲಿ, ನೀವು ಪಾವತಿಸಿದ ಶುಲ್ಕದ ವಿವರವುಳ್ಳ ಪ್ರತಿಯೊಂದಿಗೆ Bangalore District Central Co Operative Bank Ltd., No.2, (GMC Bank Campus), Pampamahakavi Road, Chamarajapet, Bengaluru-560018 ಸಂಪರ್ಕಿಸಬಹುದು.

| | |
|---|---|
| **ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ** | : 30.01.2023 |
| **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | : 28.02.2023 |
| **ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ** | : 28.02.2023 |

**ವಿಶೇಷ ಸೂಚನೆ:** **ONLINE** ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ **(Help Line) 9036377735** ಅನ್ನು ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

## ೩. ಶೈಕ್ಷಣಿಕ ವಿದ್ಯಾರ್ಹತೆ :

ಅರ್ಜಿಗಳನ್ನು ಭರ್ತಿ ಮಾಡಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರತಕ್ಕದ್ದು. ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222
ದೂರವಾಣಿ: 08182-246161, 246163
e-mail: md_shimul@yahoo.com, shimuladmn@gmail.com, www.shimul.coop

ಸಂಖ್ಯೆ: ಶಿಮುಲ್/ಆಡಳಿತ-1/ನೇ.ನೇ-370/9359/2022-23 ದಿನಾಂಕ: 31-01-2023

## ನೇಮಕಾತಿ ಪ್ರಕಟಣೆ

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಶಿವಮೊಗ್ಗ ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ 194 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಒ 147 ಸಿಸಿಬಿ 2022 ದಿನಾಂಕ: 11.10.2022 ರನ್ವಯ ಅನುಮೋದಿಸಿದಂತೆ ನೇರ ನೇಮಕಾತಿಗೆ ಪ್ರಕಟಣೆ ಹೊರಡಿಸಿರುವ ಹುದ್ದೆಗಳ ಸಂಖ್ಯೆ ಮೀಸಲಾತಿ, ವಿದ್ಯಾರ್ಹತೆ, ವಯೋಮಿತಿ, ಅರ್ಜಿ ಶುಲ್ಕ ಇತ್ಯಾದಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

1) <u>ಸಹಾಯಕ ವ್ಯವಸ್ಥಾಪಕರು(ಎಹೆಚ್/ಎಐ)</u> – ವೇತನ ಶ್ರೇಣಿ ರೂ. 52650-97100 – 17 ಹುದ್ದೆಗಳು

| ಮೀಸಲಾತಿ ವರ್ಗೀಕರಣ | | | | | | | |
|---|---|---|---|---|---|---|---|
| ಪ.ಜಾ | ಪ.ಪಂ | ಪ್ರವರ್ಗ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ |
| ಮ-1<br>ಗ್ರಾ-1 | ಅಂ.ವಿ-1<br>ಗ್ರಾ-1 | ಮ-1 | ಅಂ.ವಿ-1<br>ಮ-1<br>ಗ್ರಾ-1 | ಮ-1 | - | - | ಗ್ರಾ-3<br>ಕ.ಮಾ.ಅ-1<br>ಮ-3<br>ಯೋ.ಅ-1 |

ವಿದ್ಯಾರ್ಹತೆ: ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಶುವೈದ್ಯಕೀಯ ವಿಜ್ಞಾನ ಮತ್ತು ಪಶು ಸಂಗೋಪನೆ ವಿಷಯದಲ್ಲಿ (ಬಿ.ವಿ.ಎಸ್ಸಿ ಅಂಡ್ ಎಹೆಚ್) ಪದವಿಯನ್ನು ಹೊಂದಿರಬೇಕು.

2) <u>ಸಹಾಯಕ ವ್ಯವಸ್ಥಾಪಕರು(ಆಡಳಿತ)</u> – ವೇತನ ಶ್ರೇಣಿ ರೂ. 52650-97100 – 01 ಹುದ್ದೆ

| ಮೀಸಲಾತಿ ವರ್ಗೀಕರಣ | | | | | | | |
|---|---|---|---|---|---|---|---|
| ಪ.ಜಾ | ಪ.ಪಂ | ಪ್ರವರ್ಗ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ |
| - | - | - | - | - | - | - | ಮಾ.ಸೈ-1 |

ವಿದ್ಯಾರ್ಹತೆ: ಭಾರತದಲ್ಲಿ ಕಾನೂನು ರೀತ್ಯ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಮಾನವ ಸಂಪನ್ಮೂಲ ವಿಷಯದಲ್ಲಿ 02 ವರ್ಷಗಳ ಪೂರ್ಣಾವಧಿ ಎಂಬಿಎ ಜೊತೆಗೆ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಆಡಳಿತ ನಿರ್ವಹಣೆಯಲ್ಲಿ 03 ವರ್ಷಗಳ ಸೇವಾನುಭವ ಹಾಗೂ ಕಂಪ್ಯೂಟರ್ ನಿರ್ವಹಣೆ ಜ್ಞಾನ ಹೊಂದಿರಬೇಕು.

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಉತ್ಪಾದಕರ ಸಂಘಗಳ
ಒಕ್ಕೂಟ ನಿ., ಶಿವಮೊಗ್ಗ.

ಸಂಘಗಳ ಒಕ್ಕೂಟ ನಿ., (ಶಿಮುಲ್) ಶಿವಮೊಗ್ಗ ಇದರ ಜಾಲತಾಣದಲ್ಲಿ (WEBSITE) www.shimul.coop ನಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ಕಡ್ಡಾಯವಾಗಿ ತಾಕ್ಷಣಿಕ ಸೇವೆಯ (ONLINE) ಮೂಲಕ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಇ) ಅಭ್ಯರ್ಥಿಗಳು ಭಾರತೀಯ ನಾಗರೀಕನಾಗಿರತಕ್ಕದ್ದು.

ಎಫ್) ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಮೊದಲು ಸಲ್ಲಿಸಿದ ಅರ್ಜಿಯನ್ನು ಮಾತ್ರ ಮಾನ್ಯ ಮಾಡಲಾಗುವುದು.

ಜಿ) ಒಂದಕ್ಕಿಂತ ಹೆಚ್ಚಿನ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಒಂದೇ <u>ನೊಂದಣಿ ಸಂಖ್ಯೆಯಡಿಯಲ್ಲಿಯೇ</u> ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ, ಪ್ರತ್ಯೇಕ ಅರ್ಜಿ ಸಲ್ಲಿಸತಕ್ಕದ್ದು.

ಹೆಚ್) ನೇಮಕಾತಿ ಅರ್ಜಿಗಳನ್ನು ಖುದ್ದಾಗಿ / ಅಂಚೆ / ಕೋರಿಯರ್ ಮೂಲಕ ಸಲ್ಲಿಸಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಐ) **ಅಭ್ಯರ್ಥಿಗಳು ಎಲ್ಲಾ ದಾಖಲೆಗಳನ್ನು ಸ್ಪಷ್ಟವಾಗಿ ಕಾಣುವಂತೆ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ. ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಹಾಗೂ ಅಸ್ಪಷ್ಟ ದಾಖಲೆಗಳನ್ನು ಅಥವಾ ಮಾಹಿತಿಗಳನ್ನು ನೀಡಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

ಜೆ) ನಿಗದಿತ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಕೆ) ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

ಎಲ್) ಒಕ್ಕೂಟದ ಈ ನೇಮಕಾತಿ ಪ್ರಕಟಣೆಯಲ್ಲಿ ಸೂಚನೆಗಳನ್ನು ಪೂರ್ಣವಾಗಿ ತಿಳಿಯದೆ ಅಭ್ಯರ್ಥಿಗಳು ತಪ್ಪೆಸಗಿದಲ್ಲಿ, ಒಕ್ಕೂಟವು ಜವಾಬ್ದಾರರಾಗಿರುವುದಿಲ್ಲ.

ಎಂ) ಈ ನೇಮಕಾತಿ ಸಂಬಂಧ ಅಭ್ಯರ್ಥಿಗಳು ಸ್ಪಷ್ಟೀಕರಣ, ಪ್ರಶ್ನೋತ್ತರಗಳು, ತಕರಾರು ಇತ್ಯಾದಿಗಳಿಗೆ ಪತ್ರ / ಇ-ಮೇಲ್ ವ್ಯವಹಾರಗಳಿಗೆ ಯಾವುದೇ ಅವಕಾಶವಿರುವುದಿಲ್ಲ.

2) <u>ಅರ್ಜಿ ಶುಲ್ಕ:</u>

| | | |
|---|---|---|
| 1 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ | ಅರ್ಜಿ ಶುಲ್ಕ ರೂ. 500/- (ಬ್ಯಾಂಕ್ ಶುಲ್ಕ ಪ್ರತ್ಯೇಕ) |
| 2 | ಇತರೆ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಶುಲ್ಕ | ಅರ್ಜಿ ಶುಲ್ಕ ರೂ. 1000/- (ಬ್ಯಾಂಕ್ ಶುಲ್ಕ ಪ್ರತ್ಯೇಕ) |

- ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು Online ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
- ತಪ್ಪು ಮಾಹಿತಿಗಳನ್ನು ಮತ್ತು ಅಸ್ಪಷ್ಟ ಮಾಹಿತಿ ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಯನ್ನು ಯಾವುದೇ ನೋಟಿಸ್ ನೀಡದೇ ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
- ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಡೆಬಿಟ್ ಕಾರ್ಡ್ / ಕ್ರೆಡಿಟ್ ಕಾರ್ಡ್ / ಆನ್‌ಲೈನ್ ಮೂಲಕ ನಿಗದಿತ ಶುಲ್ಕ + ಅನ್ವಯಿಸುವ ಬ್ಯಾಂಕ್ ಶುಲ್ಕ ಪ್ರತ್ಯೇಕ ಪಾವತಿ ಮಾಡತಕ್ಕದ್ದು.
- ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **03-03-2023** ರ ನಂತರ ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು. ಡಿ.ಡಿ / ಚೆಕ್ / ಪೋಸ್ಟಲ್ ಆರ್ಡರ್ / ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಉತ್ಪಾದಕರ ಸಂಘಗಳ
ಒಕ್ಕೂಟ ನಿ., ಶಿವಮೊಗ್ಗ.

भारत सरकार,
कार्मिक, लोक शिकायत तथा पेंशन मंत्रालय,
कार्मिक एवं प्रशिक्षण विभाग,
कर्मचारी चयन आयोग,
ब्लॉक स- **12**, केन्द्रीय कार्यालय परिसर,
लोधी रोड, नई दिल्ली-**110003**

# Notice

## Multi-Tasking (Non-Technical) Staff, and Havaldar (CBIC & CBN) Examination, 2022

| | |
|---|---|
| Dates for submission of online applications | 18-01-2023 to 17-02-2023 |
| Last date and time for receipt of online applications | 17-02-2023 (23:00) |
| Last date and time for making online fee payment | 19-02-2023 (23:00) |
| Last date and time for generation of offline Challan | 19-02-2023 (23:00) |
| Last date for payment through Challan (during working hours of Bank) | 20-02-2023 |
| Dates of 'Window for Application Form Correction' and online payment of Correction Charges | 23-02-2023 to 24-02-2023 (23:00) |
| Schedule of Computer Based Examination | April, 2023 |

"GOVERNMENT STRIVES TO HAVE A WORKFORCE WHICH REFLECTS GENDER BALANCE AND WOMEN CANDIDATES ARE ENCOURAGED TO APPLY"

F.No.HQ-PPI03/26/2022-PP_1-The Staff Selection Commission will hold a competitive examination for recruitment of **Multi-Tasking (Non-Technical) Staff** (in Pay Level-1 as per Pay Matrix of 7th Pay Commission), a General Central Service Group 'C' Non-Gazetted, Non-Ministerial post in various Ministries/ Departments/ Offices of the Government of India and various Constitutional Bodies/ Statutory Bodies/ Tribunals, etc., in different States/ Union Territories and Havaldar (in Pay Level-1 as per Pay Matrix of 7th Pay Commission), a General Central Service Group 'C' Non-Gazetted, Non-Ministerial post in Central Board of Indirect Taxes and Customs (CBIC) and Central Bureau of Narcotics (CBN) under Department of Revenue, Ministry of Finance.

2 **Vacancies:**

2.1 Tentative vacancies for the posts are as under:

MTS : 10880 (approx.)#

Havaldar in CBIC and CBN : 529*

#Updated/detailed vacancies will be made available on the website of the Commission (https://ssc.nic.in->Candidate's Corner-> Tentative Vacancy).

*Details of vacancies of Havaldar in CBIC and CBN are given at **Annexure-XVIII**.

3 **Reservation:**

3.1 Reservation will be provided for the Scheduled Castes (SC), Scheduled Tribes (ST), Other Backward Classes (OBC), Economically Weaker Sections (EWS), Ex-servicemen (ESM) and Persons with Benchmark Disabilities (PwBD), etc. as per extant Govt. Orders.

3.2 The Commission makes the selection of candidates in accordance with the vacancies reported by the User Departments for various posts. The Commission does not have any role in deciding the number of vacancies of any User Department. Implementation of reservation policy, maintaining reservation roster and earmarking of vacancies for different categories are under the domain of the User Departments.

4 **Permissible disabilities for Persons with Disabilities (PwBD) candidates:**

4.1 The post of 'Multi-Tasking Staff (Non-Technical)' has been identified suitable for following benchmark disabilities:

| Name of Post | Functional Requirement | Suitable Category of Benchmark Disability |
|---|---|---|
| Multi-Tasking (Non-Technical) Staff | S, ST, W, BN, RW, SE, H, C | (a) B, LV<br>(b) D, HH<br>(c) OA, BA, OL, BL, OAL, CP, LC, Dw, AAV, MDy, SD/SI without neurological/ limb dysfunction<br>(d) ASD (M, MoD), ID, SLD, MI<br>(e) Multiple disabilities involving (a) to (d) above. |

4.2 The details of disabilities, functional classification and Physical requirement for the post of Havaldar in CBIC and CBN are as follows:

will be allowed to use the same in the Examination Hall and will not be entitled to a scribe. Such candidates will have to bring their own magnifying glass to the Examination Hall.

8.12 The PwBD/PwD candidates who have availed the facility of scribes/ passage reader and/ or compensatory time must produce relevant documents for the eligibility of scribe/ compensatory time at the time of Document Verification conducted by User Department. Failure to produce such supporting documents will lead to cancellation of their candidature for the examination.

9 **Essential Educational Qualifications (As on 17-02-2023):**

9.1 The candidates must have passed Matriculation Examination or equivalent from a recognized Board as on or before the cut-off date i.e. 17-02-2023.

9.2 As per Ministry of Human Resource Development Notification dated 10-06-2015 published in the Gazette of India, all the degrees/ diplomas/ certificates awarded through Open and Distance Learning mode of education by the Universities established by an Act of Parliament or State Legislature, Institutions Deemed to be Universities under Section 3 of the University Grants Commission Act, 1956 and Institutions of National Importance declared under an Act of Parliament stand automatically recognized for the purpose of employment to posts and services under the Central Government provided they have been approved by the Distance Education Bureau, University Grants Commission. Accordingly, unless such degrees are recognized for the relevant period when the candidates acquired the qualification, they will not be accepted for the purpose of Educational Qualification.

9.3 Document Verification (DV) will be conducted by the User Departments/ Organizations after declaration of the final result. Candidates will be required to produce the relevant Certificates such as Mark sheets, Provisional Certificates etc. for completion of Matriculation or equivalent in original as proof of having acquired the minimum educational qualification on or before the stipulated date, when such certificates are sought by concerned Indenting Departments/ Organizations for the purpose of document verification. Otherwise, their candidature will be cancelled.

9.4 The candidates who are able to prove, by documentary evidence, that the result of the qualifying examination was declared on or before the cut-off date and he has been declared passed, will also be considered to meet the educational qualification. **It is reiterated that the result of required educational qualification must have been declared by the Board/ University by the specified date. Mere processing of the**

# ಪ್ರಾಚೀನ ಭಾರತದ ಗಣರಾಜ್ಯಗಳು (Ancient Indian Republics)

- ಗಣರಾಜ್ಯಗಳು ಭಾರತದ ಉತ್ತರದ ಅಂಚಿನಲ್ಲಿ, ಹಿಮಾಲಯದ ತಪ್ಪಲುಗಳಲ್ಲಿ, ಪೂರ್ವದ ಗುಡ್ಡಗಾಡು ಪ್ರದೇಶಗಳಲ್ಲಿ ಹೆಚ್ಚಾಗಿ ನೆಲೆಸಿದ್ದವು.
- ಆರ್ಯರು ರಾಜಪ್ರಭುತ್ವದಲ್ಲಿ ಹೆಚ್ಚುತ್ತಿದ್ದ ಸಂಪ್ರದಾಯ ಬದ್ಧತೆ ಹಾಗೂ ನಿರಂಕುಶಾಧಿಕಾರಗಳನ್ನು ವಿರೋಧಿಸಿ ಗುಡ್ಡಗಾಡಿನತ್ತ ಚಲಿಸಿ ಅಲ್ಲಿ ಗಣರಾಜ್ಯಗಳನ್ನು ಸ್ಥಾಪಿಸಿದರು.
- ಪ್ರಪಂಚದ ಪ್ರಮುಖ ಧರ್ಮಗಳಾದ ಬೌದ್ಧ ಹಾಗೂ ಜೈನ ಧರ್ಮಗಳ ಸ್ಥಾಪಕರುಗಳಾದ ಬುದ್ಧ ಹಾಗೂ ಮಹಾವೀರರು ಜನಿಸಿದ್ದು ಇಂಥ ಸ್ವತಂತ್ರ ಗಣರಾಜ್ಯಗಳಲ್ಲಿ.

ಬೌದ್ಧ ಸಾಹಿತ್ಯದಲ್ಲಿದ್ದ 10 ಗಣರಾಜ್ಯಗಳು ಈ ಕೆಳಗಿನಂತಿವೆ;

| | |
|---|---|
| 1) ಕಪಿಲ ವಸ್ತುವಿನ ಶಾಕ್ಯರು | 2) ಅಲ್ಲಕಪ್ಪದ ಬುಲ್ಲಿಯರು |
| 3) ಕೆಸಪಟ್ಟದ ಕಳಮಾರುಗಳು | 4) ಸಮಾಸುಮ ಬೆಟ್ಟಗಳ ಭಗ್ಗರು |
| 5) ಮಿಥಿಲದ ವಿದೇಹರು | 6) ವೈಶಾಲಿಯ ಲಿಚ್ಛವಿಗಳು |
| 7) ವಸಾಲಿಯ ನಾಯರು (ಜ್ಞಾತ್ರಿಕರು) | 8) ಪಿಪ್ಪಲಿ ವನದ ಮೌರ್ಯರು |
| 9) ಪವದ ಮಲ್ಲರು | 10) ಹುಸಿನಾರದ ಮಲ್ಲರು |

## ಪ್ರಮುಖ ಗಣರಾಜ್ಯಗಳ ಸಂಕ್ಷಿಪ್ತ ಪರಿಚಯ

### ಕಪಿಲ ವಸ್ತುವಿನ ಶಾಕ್ಯರು

- ಗೌತಮ ಬುದ್ಧನು ಈ ಗಣರಾಜ್ಯದಲ್ಲಿ ಜನಿಸಿದನು. ಈ ಕಾರಣದಿಂದಾಗಿ ಬುದ್ಧನನ್ನು ಶಾಕ್ಯಮುನಿ ಎಂದು ಕರೆಯಲಾಗುತ್ತಿತ್ತು.
- ಕಪಿಲವಸ್ತು ಈ ಗಣರಾಜ್ಯದ ರಾಜಧಾನಿಯಾಗಿತ್ತು.
- ಈ ಗಣರಾಜ್ಯವು 80 ಸಾವಿರ ಕುಟುಂಬಗಳನ್ನೊಳಗೊಂಡಿತ್ತು. ಇಲ್ಲಿ ಐದು ಲಕ್ಷ ಜನಸಂಖ್ಯೆ ಇದ್ದಿತೆಂದು ತಿಳಿದುಬರುತ್ತದೆ.
- ಪ್ರಜಾಪ್ರಭುತ್ವದ ನಿಯಮಗಳನುಸಾರ ಎಲ್ಲ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು.
- ಸಮಸ್ಯೆಗಳನ್ನು ರಾಜ್ಯದ ಸಭೆಯಲ್ಲಿ ಚರ್ಚಿಸಲಾಗುತ್ತಿತ್ತು.
- ಎಲ್ಲರೂ ಸೇರುತ್ತಿದ್ದ ಸಭೆಯ ಸಭಾಂಗಣವನ್ನು ಸಂತಗಾರ ಎಂದು ಕರೆಯುತ್ತಿದ್ದರು. ರಾಜ್ಯದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗುತ್ತಿತ್ತು. ಸಭೆಯ ಅಧ್ಯಕ್ಷನನ್ನು 'ರಾಜ'ಎಂದು ಕರೆಯಲಾಗುತ್ತಿತ್ತು.

### ವೈಶಾಲಿಯ ಲಿಚ್ಛವಿಗಳು

- ಇವರು ಬೌದ್ಧ ಹಾಗೂ ಜೈನ ದಾಖಲೆಗಳ ಪ್ರಕಾರ ಕ್ಷತ್ರಿಯರೆಂದು ತಿಳಿದುಬರುತ್ತದೆ.
- ಪವದ ಮಲ್ಲರೊಂದಿಗೆ ಇವರು ಸಂಬಂಧ ಹೊಂದಿದ್ದರು.
- ಲಿಚ್ಛವಿ ಇವರ ರಾಜಧಾನಿಯಾಗಿತ್ತು.
- ಬುದ್ಧನ ಕಾಲದಲ್ಲಿ ಲಿಚ್ಛವಿ ಸುಂದರ ಹಾಗೂ ಸಂಪದ್ಭರಿತ ನಗರವಾಗಿತ್ತು. ಇಲ್ಲಿ ಬೌದ್ಧ ಯತಿಗಳಿಗಾಗಿ ಸುಂದರ ವಿಹಾರಗಳನ್ನು ನಿರ್ಮಿಸಿದ್ದರು.
- ಬುದ್ಧನನ್ನು ಗೌರವಿಸಲು ಬೌದ್ಧಧರ್ಮದ ಅನುಯಾಯಿಗಳು ಇಲ್ಲಿ ಹೆಸರಾಂತ ಕುಟೋಗರಶಾಲವನ್ನು ನಿರ್ಮಿಸಿದ್ದರು.
- ರಾಜ್ಯದ ವಿದೇಶಿ ಸಂಬಂಧವನ್ನು ನೋಡಿಕೊಳ್ಳಲು ಒಂಬತ್ತು ಜನ ಹಿರಿಯರುಳ್ಳ ಸಭೆಯನ್ನು ಸ್ಥಾಪಿಸಲಾಗಿತ್ತು.
- ಜನಸಾಮಾನ್ಯ ಸಭೆಯಲ್ಲಿ ಮುಕ್ತವಾಗಿ ಹಾಗೂ ಸ್ವತಂತ್ರವಾಗಿ ಚರ್ಚಿಸಲು ಎಲ್ಲರಿಗೂ ಅವಕಾಶವಿತ್ತು.
- ರಾಜ್ಯದ ಎಲ್ಲ ವಿಷಯಗಳನ್ನು ಚರ್ಚಿಸಲು ಪ್ರತ್ಯೇಕ ಮಂತ್ರಾಲೋಚನೆ ಸಭೆಯನ್ನು ರಚಿಸಲಾಗಿತ್ತು.
- ನಾಯಕ ಎಂದು ಇದರ ಮುಖ್ಯಸ್ಥನನ್ನು ಕರೆಯಲಾಗುತ್ತಿತ್ತು.

### ಮಿಥಿಲದ ವಿದೇಹರು

- ಜನಕ ಮಹಾರಾಜನ ಕಾಲದಲ್ಲಿ ರಾಜತ್ವ ಹೊಂದಿದ್ದ ಇದು ನಂತರದ ಕಾಲದಲ್ಲಿ ಗಣರಾಜ್ಯವಾಯಿತು. ಮಿಥಿಲ ಇದರ ರಾಜಧಾನಿ.
- ಈ ಗಣರಾಜ್ಯವು ಬುದ್ಧನ ಕಾಲದಲ್ಲಿ ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ಸುತ್ತಮುತ್ತಲಿನ ವ್ಯಾಪಾರಿಗಳು ಇಲ್ಲಿ ವ್ಯಾಪಾರಕ್ಕೆ ಬರುತ್ತಿದ್ದರು.
- 10 ಸಾವಿರ ಗ್ರಾಮಗಳನ್ನು ಈ ಗಣರಾಜ್ಯವು ಹೊಂದಿತ್ತೆಂದು ತಿಳಿದುಬರುತ್ತದೆ.
- ಜನಕನ ಕಾಲದಿಂದಲೂ ಧಾರ್ಮಿಕ ಹಾಗೂ ತಾತ್ವಿಕ ವಿಚಾರಗಳಿಗೆ ಹೆಸರಾದ ಈ ಪ್ರದೇಶ ನಂತರವೂ ತಾತ್ವಿಕ ಚಿಂತನೆಗಳಿಗೆ ಹಾಗೂ ಅಧ್ಯಯನಗಳಿಗೆ ಹೆಸರುವಾಸಿಯಾಯಿತು.

### ವಸಾಲಿಯ ನಾಯರು (ಜ್ಞಾತ್ರಿಕರು)

- ಈ ಗಣರಾಜ್ಯದ ಜನರು ಧಾರ್ಮಿಕ ಶ್ರದ್ಧೆ ಹಾಗೂ ದೈವಭಕ್ತಿಯುಳ್ಳವರಾಗಿದ್ದರು.
- ಇವರು ಶಾಖಾಹಾರಿಗಳಾಗಿದ್ದು, ಎಲ್ಲ ಪಾಪಗಳಿಂದ ದೂರವಿದ್ದರು.
- ಇಲ್ಲಿ ಹಿರಿಯರಿಂದ ಕೂಡಿದ ಸಭೆಯ ಮೂಲಕ ಆಡಳಿತ ನಡೆಸಲಾಗುತ್ತಿತ್ತು.
- ಸಭೆಯಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುತ್ತಿತ್ತು.
- ಅಧ್ಯಕ್ಷನಿಗೆ ಆಡಳಿತದಲ್ಲಿ ವೈಸರಾಯ್ ಮತ್ತು ಸೇನಾನಿ ಎಂಬ ಇಬ್ಬರೂ ಅಧಿಕಾರಿಗಳು ಸಹಾಯ ಮಾಡುತ್ತಿದ್ದರು.
- ಈ ಗಣರಾಜ್ಯದ ಬಹುಸಂಖ್ಯಾತ ಜನರು ಜೈನರಾಗಿದ್ದು, ಸಲ್ಲೇಖನ ವ್ರತವನ್ನಾಚರಿಸಿ ಪ್ರಾಣ ಕಳೆದುಕೊಳ್ಳುತ್ತಿದ್ದರು.

## ಗಣರಾಜ್ಯಗಳ ಅವನತಿಗೆ ಕಾರಣಗಳು

- ಅರ್ಥಶಾಸ್ತ್ರದ ಕರ್ತೃವಾದ ಕೌಟಿಲ್ಯನ ಸಾರ್ವಭೌಮತ್ವದ ಕಲ್ಪನೆ ಗಣರಾಜ್ಯಗಳ ಅವನತಿಗೆ ಕಾರಣವಾಗಿತ್ತು.
- ಈ ಕಲ್ಪನೆಯ ಪ್ರೇರಣೆಯಿಂದಾಗಿ ಚಂದ್ರಗುಪ್ತ ಮೌರ್ಯ ಸಣ್ಣಪುಟ್ಟ ಗಣರಾಜ್ಯಗಳನ್ನು ಜಯಿಸಿ ಸಾರ್ವಭೌಮ ಸಾಮ್ರಾಜ್ಯವನ್ನು ಸ್ಥಾಪಿಸಿದನು.
- ಇದರ ಫಲವಾಗಿ ಸಣ್ಣಪುಟ್ಟ ಗಣರಾಜ್ಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವೆಂದು ಕೆ. ಪಿ. ಜಯಸ್ವಾಲ್ ಅವರು ಹೇಳುವುದನ್ನು ಕೆಲವರು ತಿರಸ್ಕರಿಸಿದ್ದಾರೆ.
- ಇನ್ನೊಂದು ಅಭಿಪ್ರಾಯದ ಪ್ರಕಾರ ಮೌರ್ಯ ಹಾಗೂ ಗುಪ್ತ ಸಂತತಿಯ ಅರಸರುಗಳು ಸಾಮ್ರಾಜ್ಯಶಾಹಿ ಧೋರಣೆಗೆ ಮಹತ್ವವನ್ನು ಕೊಟ್ಟ ಸಂದರ್ಭದಲ್ಲಿ ಎಲ್ಲ ಗಣರಾಜ್ಯಗಳು ಕಣ್ಮರೆಯಾಗಲಿಲ್ಲ.
  ಉದಾ: ಮಾಳವ, ಮಾದ್ರಕ, ಯೌಧೇಯ ಇತ್ಯಾದಿ. ಇವು ಗುಪ್ತರ ಸಾರ್ವಭೌಮತ್ವವನ್ನು ಅಂಗೀಕರಿಸಿದರೂ ತಮ್ಮ ಸ್ವಾಯತ್ತತೆಯನ್ನು ಕಾಯ್ದುಕೊಂಡಿದ್ದವು.
- ಈ ರೀತಿಯ ತದ್ವಿರುದ್ಧದ ಭಾವನೆಗಳು ಅಭಿವ್ಯಕ್ತವಾಗಿದ್ದರೂ ಕೆ. ಪಿ. ಜಯಸ್ವಾಲ್‌ರ ಅಭಿಪ್ರಾಯವನ್ನು ಸಂಪೂರ್ಣವಾಗಿ ತಿರಸ್ಕರಿಸುವಂತಿಲ್ಲ. ಕಾರಣ ಗಣರಾಜ್ಯಗಳಲ್ಲಿ ಇದ್ದ ದ್ವೇಷ, ಸಂಚಿನ ಮನೋಭಾವ, ಪ್ರಬಲ ಗಣರಾಜ್ಯಗಳು ಚಿಕ್ಕ ಗಣರಾಜ್ಯಗಳ ಮೇಲೆ ಪ್ರಭುತ್ವ ಹೇರುವ ಪ್ರಯತ್ನ ಹಾಗೂ ಪ್ರಭುತ್ವ ಸ್ಥಾಪನೆಯತ್ತ ಗಣರಾಜ್ಯಗಳ ಒಲವು ಗಣರಾಜ್ಯಗಳ ಅಸ್ತಿತ್ವಕ್ಕೆ ಮಾರಕ ಅಂಶಗಳಾಗಿ ವರ್ತಿಸಿದವು.
- ಈ ಅಂಶಗಳ ಜೊತೆ ಪರಕೀಯರ ಆಕ್ರಮಣಗಳು ಕೂಡ ಗಣರಾಜ್ಯಗಳ ಅವನತಿಗೆ ಕಾರಣವಾದವು.

## ಹದಿನಾರು ಮಹಾಜನಪದಗಳು ಮತ್ತು ಗಣರಾಜ್ಯಗಳ ಪ್ರಮುಖ ಅಂಶಗಳು

- ಹದಿನಾರು ಮಹಾಜನಪದಗಳು ಅಸ್ತಿತ್ವಕ್ಕೆ ಬಂದದ್ದು –**ಕ್ರಿ.ಪೂ. 6ನೇ ಶತಮಾನದಲ್ಲಿ**
- ಕ್ರಿ. ಪೂ. 6ನೇ ಶತಮಾನದಲ್ಲಿ ಉದಯಿಸಿದ ಪ್ರಪಂಚದ ಪ್ರಮುಖ ಧರ್ಮಗಳು – **ಜೈನ ಮತ್ತು ಬೌದ್ಧ ಧರ್ಮಗಳು**
- ಎಷ್ಟು ಮಹಾಜನಪದಗಳು ಅಸ್ತಿತ್ವದಲ್ಲಿದ್ದವು?–**16 ರಾಜ್ಯಗಳು**
- ಕ್ರಿ. ಪೂ. 600 ರಿಂದ ಕ್ರಿ. ಪೂ. 300ರವರೆಗೆ ಹದಿನಾರು ಮಹಾಜನಪದಗಳು ಮತ್ತು ಗಣರಾಜ್ಯಗಳು ಆಳ್ವಿಕೆ ಮಾಡಿದ ಪ್ರದೇಶ –**ಅಫ್ಘಾನಿಸ್ತಾನದಿಂದ ಬಾಂಗ್ಲಾದೇಶದವರೆಗಿನ ಗಂಗಾ ನದಿಯ ಬಯಲು ಪ್ರದೇಶ**
- ಮಹಾಜನಪದಗಳಲ್ಲಿಯೇ ಅತೀ ಶಕ್ತಿಶಾಲಿ ರಾಜ್ಯಗಳಿವು – **ಮಗಧ, ಕೋಸಲ, ಕುರು ಮತ್ತು ಗಾಂಧಾರ**
- ಹಿಂದೂಗಳ ಪವಿತ್ರ ಯಾತ್ರಾಸ್ಥಳ – **ಕಾಶಿ**
- ಕಾಶಿಗೆ ಹೀಗೆಂದೂ ಸಹ ಹೆಸರುಗಳಿವೆ – **ವಾರಣಾಸಿ, ಬನಾರಸ್**
- ಗಂಗಾ ನದಿಯ ದಡದಲ್ಲಿರುವ ಕಾಶಿಯನ್ನು ಈ ನದಿಗಳು ಸುತ್ತುವರೆದಿವೆ – **ವರುಣಾ ಮತ್ತು ಅಸ್ಸಿ**
- 16 ಮಹಾಜನಪದಗಳಲ್ಲಿ ಮೊದಲು ಬೆಳಕಿಗೆ ಬಂದದ್ದು– **ಕಾಶಿ**
- ಕಾಶಿ ರಾಜ್ಯದ ರಾಜಧಾನಿ –**ವಾರಣಾಸಿ**
- ಆರಂಭದಲ್ಲಿ ಬಲಿಷ್ಠರಾಗಿದ್ದ ಕಾಶಿಯ ಅರಸರು ಹಲವಾರು ಬಾರಿ ಈ ರಾಜ್ಯದ ಮೇಲೆ ದಾಳಿ ನಡೆಸಿದ್ದರು– **ಕೋಸಲ ರಾಜ್ಯ**
- ಕಾಶಿಯ ಈ ಅರಸನು ಕೋಸಲ, ಅಂಗ ಮತ್ತು ಮಗಧಗಳನ್ನು ಜಯಿಸಿದ್ದನೆಂದು ತಿಳಿದು ಬರುತ್ತದೆ – **ಮನೋಜ್**
- ಕಾಶಿಯ ರಾಜ್ಯವು ಅಂತಿಮವಾಗಿ ಈ ರಾಜ್ಯಕ್ಕೆ ಶರಣಾಗಿ ಅದರಲ್ಲಿಯೇ ವಿಲೀನವಾಯಿತು– **ಕೋಸಲ**
- ಕೋಸಲ ಅರಸರ ಆರಂಭದ ಮತ್ತು ನಂತರ ರಾಜಧಾನಿಗಳು ಅನುಕ್ರಮವಾಗಿ– **ಅಯೋಧ್ಯೆ ಮತ್ತು ಶ್ರಾವಸ್ತಿ**
- ಇಂದಿನ ಉತ್ತರ ಪ್ರದೇಶದ ರಾಜ್ಯದ ಔಧ್‌ನಲ್ಲಿ ಆಳ್ವಿಕೆ ನಡೆಸಿದ ರಾಜ್ಯ– **ಕೋಸಲ**
- ಕೋಸಲ ರಾಜ್ಯದ ಮೂಲ ಪುರುಷನು ಈ ವಂಶದವನು– **ಈಕ್ಷ್ವಾಕು ವಂಶ**
- ಅಂಗ ರಾಜ್ಯವು ಇಂದಿನ ಈ ಪ್ರದೇಶದಲ್ಲಿ ನೆಲೆಗೊಂಡಿತ್ತು – **ಬಿಹಾರ ರಾಜ್ಯದ ಭಾಗಲ್ಪುರ ಮತ್ತು ಮೊಂಘೀರ್ ಪ್ರದೇಶ**
- ಅಂಗರಾಜ್ಯದ ರಾಜಧಾನಿ –**ಚಂಪಾ**
- ಚಂಪಾ ಎಂಬ ನಗರವು ಪುರಾಣದಲ್ಲಿ ಈ ಹೆಸರಿನಿಂದ ಉಲ್ಲೇಖಿತವಾಗಿದೆ – **ಮಾಲಿನಿ**
- ಇಂದಿನ ವಿಯೆಟ್ನಾಂವರೆಗೂ ವ್ಯಾಪಾರ ಸಂಬಂಧ ಹೊಂದಿದ್ದ ಅಂಗ ರಾಜ್ಯವನ್ನು ಅಂತಿಮವಾಗಿ ಈ ರಾಜನು ಮಗಧ ರಾಜ್ಯದಲ್ಲಿ ವಿಲೀನಗೊಳಿಸಿದನು–**ಬಿಂಬಸಾರ**
- ಮಗಧ ರಾಜ್ಯವು ಇಂದಿನ ಈ ಪ್ರದೇಶಗಳನ್ನು ಒಳಗೊಂಡಿತ್ತು – **ಬಿಹಾರದ ಪಾಟ್ನಾ ಹಾಗೂ ಗಯಾ ಜಿಲ್ಲೆಗಳನ್ನು**
- ಮಗಧ ರಾಜ್ಯದ ಪ್ರಾರಂಭದ ಮತ್ತು ನಂತರದ ರಾಜಧಾನಿಗಳು ಅನುಕ್ರಮವಾಗಿ– **ರಾಜಗೃಹ ಮತ್ತು ಪಾಟಲೀಪುತ್ರ**
- ಕ್ರಿ. ಪೂ. 5 ಹಾಗೂ 6ನೇ ಶತಮಾನಗಳಲ್ಲಿ ಮಗಧ ರಾಜ್ಯದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನ – **ಶೈಶುನಾಗ**
- ಹರ್ಯಂಕ ಮತ್ತು ಶಿಶುನಾಗ ಎಂಬ ಸಂತತಿಗಳನ್ನು ಒಟ್ಟಾಗಿ ಬೌದ್ಧ ಲೇಖಕರು ಹೀಗೆಂದು ಕರೆದಿದ್ದಾರೆ –**ಶೈಶುನಾಗ ಸಂತತಿ**
- ವೃಜ್ಜಿ ಅಥವಾ ವಜ್ಜಿ ರಾಜ್ಯವು ಸುಮಾರು ಎಂಟು ಅಥವಾ ಒಂಬತ್ತು ವಂಶದವರನ್ನೊಳಗೊಂಡ ಒಕ್ಕೂಟವಾಗಿದ್ದು, ಅವುಗಳಲ್ಲಿ ಪ್ರಮುಖವಾದವುಗಳು–**ಲಿಚ್ಛವಿಗಳು, ವಜ್ಜಿಗಳು, ಜ್ಞಾತ್ರಿಕರು**

- ಉತ್ತರ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಕೇಂದ್ರವಾಗಿದ್ದ ಮಿಥಿಲಾ ಇದರ ರಾಜಧಾನಿಯಾಗಿತ್ತು –ವಿದೇಹಾ
- ವಿದೇಹಾದ ಕೊನೆಯ ಅರಸ – ಕಲರಾ
- ಜೈನ ಧರ್ಮದ 24ನೇ ತೀರ್ಥಂಕರನಾದ ಮಹಾವೀರನ ತಾಯಿಯು ಈ ವಂಶದ ಮಹಾರಾಣಿಯಾಗಿದ್ದಳು –ಲಿಚ್ಛವಿ
- ಲಿಚ್ಛವಿಗಳ ರಾಜಧಾನಿ –ವೈಶಾಲಿ
- ಬೌದ್ಧ ಧರ್ಮದ ಎರಡನೇ ಮಹಾಸಭೆ ನಡೆದ ಸ್ಥಳ –ವೈಶಾಲಿ
- ಮನುಸ್ಮೃತಿಯಲ್ಲಿ ಉಲ್ಲೇಖಿಸಿದಂತೆ ಲಿಚ್ಛವಿಗಳು ಯಾರೆಂದು ತಿಳಿದುಬರುತ್ತದೆ –ಕ್ಷತ್ರಿಯರು
- ಮಲ್ಲ ಎಂಬ ರಾಜ್ಯವು ಒಳಗೊಂಡ ವಿಭಾಗಗಳ ಸಂಖ್ಯೆ – ಎರಡು
- ಎರಡು ವಿಭಾಗಗಳ ರಾಜಧಾನಿಗಳಿವು– ಪಾವ ಹಾಗೂ ಕುಶಿನಾರ
- ಅಲೆಗ್ಸಾಂಡರ್‌ನು ಭಾರತದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ಗಣರಾಜ್ಯ –ಮಲ್ಲ

## ಮಗಧ ಸಾಮ್ರಾಜ್ಯದ ಏಳಿಗೆ

## (Rise of Magadha Empire)

ರಾಜಧಾನಿ : ರಾಜಗೀರ್, ಪಾಟಲೀಪುತ್ರ (ಪ್ರಸ್ತುತ ಪಾಟ್ನಾ)

### ಮಗಧ ಸಾಮ್ರಾಜ್ಯದ ಸಂಕ್ಷಿಪ್ತ ಮಾಹಿತಿ

- **ಮೂಲ ಪುರುಷರು : ಜರಾಸಂಧ ಮತ್ತು ಬೃಹದ್ರತರು**
- **ಪ್ರಮುಖ ಅರಸರು : ಶಿಶುನಾಗ, ಕಾಕವರ್ಣ, ಕ್ಷೇಮಧರ್ಮನ್, ಕ್ಷಾತ್ರರಾಜ, ಬಿಂಬಸಾರ, ಅಜಾತಶತ್ರು, ದರ್ಶಕ, ಉದಯನ, ನಂದಿವರ್ಧನ, ಮಹಾನಂದಿನ್.**
- **ಆಡಳಿತ ಭಾಷೆಗಳು: ಪ್ರಾಚೀನ ಇಂಡಿಕ್ ಭಾಷೆಗಳು (ಮಾಗಧಿ ಪ್ರಾಕೃತ, ಇತರೆ ಪ್ರಾಕೃತ ಭಾಷೆಗಳು)**
- **ಧರ್ಮ: ಜೈನಧರ್ಮ, ಬೌದ್ಧಧರ್ಮ, ಬ್ರಾಹ್ಮಣ**
- **ಸರ್ಕಾರ: ಅರ್ಥಶಾಸ್ತ್ರದಲ್ಲಿನ ವಿವರಣೆಯ ಪ್ರಕಾರ ರಾಜಪ್ರಭುತ್ವ ಸರ್ಕಾರ**
- **ಇತಿಹಾಸ: ಕ್ರಿ. ಪೂ. 500–ಕ್ರಿ. ಪೂ. 321**
- **ನಾಣ್ಯ: ಪನಾಸ್**
- ಹದಿನಾರು ಮಹಾಜನಪದಗಳಲ್ಲಿ ಮಗಧ ಸಾಮ್ರಾಜ್ಯವು ಹಲವಾರು ವಂಶಗಳ ಆಳ್ವಿಕೆಯಲ್ಲಿ ಬೆಳೆಯುತ್ತಾ ಹೋಯಿತು.
- ಭಾರತದ ಅತ್ಯಂತ ಮೇರು ಚಕ್ರವರ್ತಿಗಳಲ್ಲೊಬ್ಬನಾದ ಸಾಮ್ರಾಟ ಅಶೋಕನ ಆಳ್ವಿಕೆಯಲ್ಲಿ ಮಗಧ ಸಾಮ್ರಾಜ್ಯವು ಉತ್ತುಂಗಕ್ಕೇರಿತ್ತು. ಮಗಧ ಸಾಮ್ರಾಜ್ಯಕ್ಕೆ ಸರಿಸಾಟಿಯಾದ ಸೇನೆ ಯಾವುದೂ ಇಲ್ಲವೆಂಬಂತ್ತಾಗಿತ್ತು.
- ಕ್ರಿ. ಪೂ. ಆರನೇ ಶತಮಾನದಿಂದ ನಾಲ್ಕನೇ ಶತಮಾನದ ಕಾಲವನ್ನು ಉತ್ತರ ಭಾರತದ ಏಳಿಗೆಯ ಕಾಲವೆಂದು ಪರಿಗಣಿಸಲಾಗಿದೆ.




- ಏಕೆಂದರೆ ಅಲ್ಲಿಯವರೆಗೂ ಉತ್ತರ ಭಾರತದಲ್ಲಿದ್ದ ಅನೈಕ್ಯತೆಯ ಸ್ಥಿತಿಯನ್ನು ಹೋಗಲಾಡಿಸಿ ರಾಜಕೀಯ ಐಕ್ಯತೆಯನ್ನು ತರುವಲ್ಲಿ ಮಗಧ ರಾಜ್ಯವು ಪ್ರಮುಖ ಪಾತ್ರವಹಿಸಿತು.
- ಅವಂತಿ, ವತ್ಸ, ಕೋಸಲ ರಾಜ್ಯಗಳು ಮಗಧ ಸಾಮ್ರಾಜ್ಯದ ಪ್ರಾಬಲ್ಯಕ್ಕೆ ಸರಿಸಮಾನವಾಗಿ ನಿಲ್ಲಬಲ್ಲಂತವುಗಳಾಗಿದ್ದವು. ಆದರೆ ನಂತರ ಇವು ಅಪ್ರಬಲಗೊಂಡವು.
- ಆಕ್ರಮಣ ನೀತಿಯನ್ನು ತಾಳಿದ್ದ ಈ ನಾಲ್ಕು ರಾಜ್ಯಗಳಲ್ಲಿ ಕ್ರಮೇಣ ಪರಸ್ಪರ ಕದನಗಳೇರ್ಪಟ್ಟವು. ಅವುಗಳಲ್ಲೆಲ್ಲ ಜಯಶೀಲವಾದ ಮಗಧ ಉತ್ತರ ಭಾರತದಲ್ಲಿಯೇ ಪ್ರಬಲ ರಾಜ್ಯವಾಗಿ ಬೆಳೆಯಿತು.
- ದಕ್ಷಿಣ ಬಿಹಾರಿನ ಗಯಾ, ಪಾಟ್ನಾ ಜಿಲ್ಲೆಗಳು ಮಗಧ ರಾಜ್ಯದಲ್ಲಿ ವಿಲೀನವಾಗಿದ್ದವು.
- ಇದರ ಮೊದಲ ರಾಜಧಾನಿ ರಾಜಗೃಹ.
- ಪ್ರಾಚೀನ ಭಾರತದಲ್ಲಿ ಸ್ಥಾಪಿಸಲ್ಪಟ್ಟ ಐತಿಹಾಸಿಕ ಸಾಮ್ರಾಜ್ಯಗಳಲ್ಲಿ ಮಗಧ ಸಾಮ್ರಾಜ್ಯ ಪ್ರಪ್ರಥಮವಾದುದಾಗಿದೆ.
- ಈ ಸಾಮ್ರಾಜ್ಯದಲ್ಲಿ ಒಟ್ಟು ಎಂಟು ಮನೆತನಗಳು ಒಂದನ್ನೊಂದು ಹಿಂಬಾಲಿಸಿ ಆಡಳಿತವನ್ನು ಮಾಡಿದವು.
- ಅವುಗಳೆಂದರೆ ಅಸುರರ ಮನೆತನ, ಶಿಶುನಾಗ ಮನೆತನ, ನಂದ ಮನೆತನ, ಮೌರ್ಯ ಮನೆತನ, ಗುಪ್ತ ಮನೆತನ ಇನ್ನೂ ಮುಂತಾದವು.
- ಜರಾಸಂಧ ಮತ್ತು ಬೃಹದ್ರತರು ಪುರಾಣಗಳ ಪ್ರಕಾರ ಮಗಧ ರಾಜ್ಯದ ಸ್ಥಾಪಕರಾಗಿದ್ದಾರೆ.
- ಪ್ರದ್ಯೋತ ಸಂತತಿಯವರು ಬೃಹದ್ರತ ಸಂತತಿಯ ತರುವಾಯ ಅಧಿಕಾರಕ್ಕೆ ಬಂದರು.
- ಶಿಶುನಾಗ ಎಂಬುವನು ಪ್ರದ್ಯೋತ ಸಂತತಿಯನ್ನು ಮೂಲೆಗೆ ತಳ್ಳಿ ಶೈಶುನಾಗ ಸಂತತಿಯನ್ನು ಸ್ಥಾಪಿಸಿದನು.
- ಶಿಶುನಾಗ, ಕಾಕವರ್ಣ, ಕ್ಷೇಮಧರ್ಮನ್, ಕ್ಷಾತ್ರರಾಜ, ಬಿಂಬಸಾರ, ಅಜಾತಶತ್ರು, ದರ್ಶಕ, ಉದಯನ, ನಂದಿವರ್ಧನ, ಮಹಾನಂದಿನ್ ಎಂಬ ಅರಸರು ಮಗಧ ಸಾಮ್ರಾಜ್ಯವನ್ನಾಳಿದ್ದಾರೆ.

- ರಾಜಗೃಹದಲ್ಲಿ ಹೊಸ ರಾಜಮನೆತನವನ್ನು ಸ್ಥಾಪಿಸಿದ ಶಿಶುನಾಗನನ್ನು (ಕ್ರಿ. ಪೂ. 706–666) ಹರ್ಯಂಕ ವಂಶದವನೆಂದು ಹೇಳಲಾಗಿದೆ.

## ಬಿಂಬಸಾರ (ಕ್ರಿ. ಪೂ. 570–542)

- ಬಿಂಬಸಾರನು ಮಗಧ ಸಾಮ್ರಾಜ್ಯದ ಪ್ರಾರಂಭಿಕ ಅರಸರಲ್ಲಿ ಪ್ರಖ್ಯಾತನವನಾಗಿದ್ದಾನೆ.
- ಈತನನ್ನು ಸೇನಿಯ ಅಥವಾ ಶ್ರೇಣಿಕನೆಂದು ಕರೆಯಲಾಗುತ್ತಿತ್ತು.
- ಇವನು ವೈವಾಹಿಕ ಸಂಬಂಧ ಹಾಗೂ ಯಶಸ್ವಿ ಸೈನಿಕ ವಿಜಯಗಳಿಂದ ತನ್ನ ರಾಜ್ಯದ ಪ್ರಾಬಲ್ಯವನ್ನು ಹೆಚ್ಚಿಸಿದನು.
- ವೈಶಾಲಿ, ಮದ್ರ ಹಾಗೂ ಕೋಸಲದ ರಾಜಮನೆತನಗಳೊಡನೆ ಬಿಂಬಸಾರನು ವೈವಾಹಿಕ ಸಂಬಂಧ ಏರ್ಪಡಿಸಿದನು.
- ಬಿಂಬಸಾರನ ಪತ್ನಿ ಅಜಾತಶತ್ರುವಿಗೆ ಜನ್ಮವಿತ್ತಳು.
- ಕೋಸಲ ಸಾಮ್ರಾಜ್ಯದಿಂದ ಬಿಂಬಸಾರನು ಕಾಶಿ ಗ್ರಾಮವನ್ನು ಬಳುವಳಿಯಾಗಿ ಪಡೆದುಕೊಂಡಿದ್ದನು.
- ಸೈನಿಕ ಕಾರ್ಯಾಚರಣೆಯಿಂದ ಬಿಂಬಸಾರನು ಅಂಗ ರಾಜ್ಯವನ್ನು ಗೆದ್ದು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.
- ಅಂಗದ ಅರಸ ಬ್ರಹ್ಮದತ್ತ ಬಿಂಬಸಾರನ ತಂದೆಯನ್ನು ಸೋಲಿಸಿದ್ದನು. ಹೀಗಾಗಿ ಬಿಂಬಸಾರನು ಅಂಗದ ಮೇಲೆ ಯುದ್ಧ ಮಾಡಿ ಜಯಗಳಿಸಿದನು.
- ಅಲ್ಲದೆ ತನ್ನ ಮಗನಾಗಿದ್ದ ಅಜಾತಶತ್ರುವನ್ನು ಅಂಗದ ರಾಜಧಾನಿ ಚಂಪಾದ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು.
- ಬರ್ಮಾ ಹಾಗೂ ಪೂರ್ವ ಭಾರತದ ಕರಾವಳಿಯ ಬಂದರುಗಳ ಜೊತೆ ಸಂಪರ್ಕವನ್ನು ಸಾಧಿಸಿದ್ದರಿಂದ ಮಗಧ ಸಾಮ್ರಾಜ್ಯ ಆರ್ಥಿಕವಾಗಿ ಪ್ರಬಲಗೊಂಡಿತು.

### ಬಿಂಬಸಾರನ ಆಡಳಿತ

- ಬಿಂಬಸಾರನ ಕಾಲಾವಧಿಯಲ್ಲಿ ಮಗಧ ಸಾಮ್ರಾಜ್ಯವು ಸುಮಾರು 80,000 ಹಳ್ಳಿಗಳನ್ನು ಒಳಗೊಂಡಿತ್ತು.
- ಗ್ರಾಮಿಕರು ಹಳ್ಳಿಗಳ ಮುಖ್ಯಸ್ಥರಾಗಿದ್ದು, ಗ್ರಾಮಗಳ ಆಡಳಿತವನ್ನು ನಿರ್ವಹಿಸುತ್ತಿದ್ದರು.
- ಮಹಾಮಾತ್ರರು ಅತ್ಯುನ್ನತ ಹುದ್ದೆಯಲ್ಲಿದ್ದ ಅಧಿಕಾರಿಗಳಾಗಿದ್ದರು.
- ನ್ಯಾಯಾಂಗ ತಪ್ಪಿತಸ್ಥರನ್ನು ಶಿಕ್ಷಿಸಲು ಅಥೆನ್ಸ್‌ನ ಡ್ರಕೋನಿಯನ್ ಕಾಯ್ದೆಗಳ ರೀತಿಯಲ್ಲಿ ಉಗ್ರವಾದ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಉದಾ: ಚಾವಟಿ ಶಿಕ್ಷೆ, ಶಿರಚ್ಛೇದನ, ನಾಲಿಗೆ ಕೀಳುವುದು ಇತ್ಯಾದಿ.
- 1/6 ಭಾಗವನ್ನು ಕಂದಾಯದ ರೂಪದಲ್ಲಿ ಭೂಹುಟ್ಟುವಳಿಯನ್ನು ಅರಸನು ಪಡೆಯುತ್ತಿದ್ದನು.
- ಜೈನ ಮತ್ತು ಬೌದ್ಧ ಧರ್ಮ ರಾಜಾಶ್ರಯ ಪಡೆದಿದ್ದವು.
- ಗೌತಮ ಬುದ್ಧನನ್ನು ಔತಣ ಕೂಟಕ್ಕೆ ಆಹ್ವಾನಿಸಿ ಸ್ವತಃ ಬಿಂಬಸಾರನೇ ಊಟವನ್ನು ಬಡಿಸಿದನು ಹಾಗೂ ಬೌದ್ಧಸಂಘಕ್ಕೆ ವೇಲುವನವನ್ನು ಉಡುಗೊರೆಯಾಗಿ ಕೊಡುವುದಾಗಿ ವಾಗ್ದಾನ ಮಾಡಿದನು.

## ಅಜಾತಶತ್ರು (ಕ್ರಿ. ಪೂ. 491–462)

- ಬಿಂಬಸಾರನ ವಂಶದ ಪರಾಕಾಷ್ಠೆಯನ್ನು ಈತನ ಮಗನಾದ ಅಜಾತಶತ್ರುವಿನ ಕಾಲದಲ್ಲಿ ಕಾಣಬಹುದಾಗಿದೆ.
- ಈತನು ಪ್ರಬಲ ದೊರೆಯಾಗಿದ್ದನು.
- ತನ್ನ ತಂದೆಯನ್ನೇ ಕೊಂದು ಸಿಂಹಾಸನವನ್ನೇರಿದ ಅಜಾತಶತ್ರುವಿನ ದಿಗ್ವಿಜಯಗಳು ಹರ್ಯಂಕ ವಂಶದ ಕೀರ್ತಿಗೆ ಕಳಶಪ್ರಾಯವಾಗಿದ್ದವು.
- ಕುನಿಕ ಎಂಬುದು ಅಜಾತಶತ್ರುವಿನ ಇನ್ನೊಂದು ಹೆಸರಾಗಿತ್ತು.
- ಕೋಸಲದ ಅರಸ ಪ್ರಸೇನಜಿತ ಈತನ ನಡತೆಯನ್ನು ಕಂಡು ಸಹಿಸದೇ ತುಂಬ ತವಕಗೊಂಡನು.
- ಅಜಾತಶತ್ರು ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಬಿಂಬಸಾರನನ್ನು ಕೊಲೆ ಮಾಡಿದುದರಿಂದಾಗಿ ಪ್ರಸೇನಜೀತನ ತಂಗಿ ವಿಧವೆಯಾದದ್ದರಿಂದ ಸಿಟ್ಟಿಗೆದ್ದ ಪ್ರಸೇನಜೀತನು ಬಿಂಬಸಾರನಿಗೆ ವರದಕ್ಷಿಣೆಯಾಗಿ ಕೊಟ್ಟಿದ್ದ ಪ್ರದೇಶ ಕಾಶಿಯನ್ನು ತನ್ನ ವಶಕ್ಕೆ ತೆಗೆದುಕೊಂಡನು.ಇದು ಇವರಿಬ್ಬರ ನಡುವೆ ಯುದ್ಧಕ್ಕೆ ಕಾರಣವಾಯಿತು.
- ಯುದ್ಧದ ನಂತರ ಕಾಶಿಯನ್ನು ಅಜಾತಶತ್ರುಗೆ ಹಿಂದಿರುಗಿಸಿ ತನ್ನ ಪುತ್ರಿಯಾಗಿದ್ದ ವಜೀರಾಳನ್ನು ಅಜಾತಶತ್ರುವಿಗೆ ವಿವಾಹ ಮಾಡಿಕೊಟ್ಟನು. ಈ ರೀತಿಯಾಗಿ ಯುದ್ಧ ಮುಕ್ತಾಯಗೊಂಡಿತು.
- ಲಿಚ್ಛವಿ ಗಣರಾಜ್ಯದ ಹಿರಿತನದಲ್ಲಿ ಒಟ್ಟು 36 ಗಣರಾಜ್ಯಗಳು ಸೇರಿ ಒಕ್ಕೂಟವನ್ನು ಮಾಡಿಕೊಂಡವು. ಆಗ ಒಕ್ಕೂಟ ಮತ್ತು ಅಜಾತಶತ್ರುವಿನ ಮಧ್ಯೆ ಯುದ್ಧ ಘಟಿಸಲು ಸಾರ್ವಭೌಮತ್ವ ಸ್ಥಾಪನೆಗೆ ಕಾರಣವಾಯಿತು. ಹೀಗೆ ಯುದ್ಧವು ನಡೆದು ಅಜಾತಶತ್ರು ಲಿಚ್ಛವಿ ಒಕ್ಕೂಟವನ್ನು ಸೆದೆಬಡೆಯುವಲ್ಲಿ ಯಶಸ್ವಿಯಾದನು.
- ಮಗಧ ಅರಸ ಅಜಾತಶತ್ರು ಪೂರ್ವ ಭಾರತದ ಮೇಲೆ ಪ್ರಭುತ್ವ ಸಾಧಿಸಿದ್ದು, ಆವಂತಿಯ ಅರಸನಾಗಿದ್ದ ಪ್ರದ್ಯೋತರನ್ನು ಕೆರಳಿಸಿತು.
- ಆತನು ಸಾಮ್ರಾಜ್ಯ ಸ್ಥಾಪನಾ ಭಾವನೆಯನ್ನು ಹೊಂದಿದ್ದನ್ನು ತಿಳಿದ ಅಜಾತಶತ್ರು ತನ್ನ ರಾಜಧಾನಿ ರಾಜಗೃಹವನ್ನು ಭದ್ರಗೊಳಿಸಿದನು.
- ಅಜಾತಶತ್ರುವಿನ ಅಕಾಲಿಕ ಮರಣದಿಂದಾಗಿ ಆವಂತಿಯ ಅರಸ ಮಗಧದ ಮೇಲೆ ಆಕ್ರಮಣವನ್ನು ಎಸಗಲಿಲ್ಲ.
- ಪುರಾಣಗಳ ಪ್ರಕಾರ ದರ್ಶಕ ಎಂಬುವನು ಅಜಾತಶತ್ರುವಿನ ಉತ್ತರಾಧಿಕಾರಿಯಾಗಿ ಬಂದನು.
- ಅನಂತರ ಉದಯನ (ಭದ್ರ) ಎಂಬುವನು ಅಧಿಕಾರಕ್ಕೆ ಬಂದನು.
- ಉದಯನು ಸುಮಾರು 16 ವರ್ಷಗಳ ಕಾಲ ರಾಜ್ಯವಾಳಿದನು. ಕುಸುಮಪುರವನ್ನು ಈತನೇ ಕಟ್ಟಿಸಿದಂತೆ ಕಂಡುಬರುತ್ತದೆ.

# FACILITIES OF KUMADVATHI COLLEGE OF EDUCATION




















# SWAMY VIVEKANANDA VIDYA SAMSTHE (R), SHIKARIPURA

## OUR INSTUITIONS

***in Shikaripura***

- **KUMADVATHI COLLEGE OF EDUCATION**
  kumadvathibed@gmail.com
  Course Offered: Bachelor of Education
- **KUMADVATHI SCIENCE AND COMMERCE P U COLLEGE**
  kscpuccollege@gmail.com
  Course Offered: Science Stream – Physics, Chemistry, Mathematics, Biology
  Physics, Chemistry, Mathematics, Computer Science
  Commerce Stream – Economics, Business Studies, Accountancy, Computer Science
- **KUMADVATHI RESIDENTIAL CENTRAL SCHOOL**
  principalkrcs@gmail.com
  Course Offered: LKG, UKG, and 1st Standard to 4th Standard – Non-Residential
  5th to 10th Standard – Residential and Non-Residential
- **KUMADVATHI HIGH SCHOOL**
  khsmythri@gmail.com
  Course Offered: 8th Standard to 10th Standard (Kannada and English Medium)
- **MYTHRI LOWER AND HIGHER PRIMARY SCHOOL**
  khsmythri@gmail.com
  Course Offered: LKG, UKG, and 1st Standard to 7th Standard (English Medium)
  6th to 7th Standard English Medium)
- **KUMADVATHI APPAREL TRAINING AND DESIGN CENTRE**
  kumadvathiatdc@gmail.com
  Course Offered: S.M.O., S.D.C.,
- **KUMADVATHI FIRST GRADE COLLEGE**
  kumadvathifgc@gmail.com
  Course Offered: B.Sc – Chemistry, Botany, Biology
  Physics, Chemistry, Mathematics
  Physics, Mathematics, Computer Science
  Chemistry, Mathematics, Computer Science
  B.Com - Common Subjects
  M.Com - Common Subjects

***<u>in Shivamogga</u>***

- **MYTHRI COLLEGE OF EDUCATION**
  mythrieducationgroup@gmail.com
  Course Offered: Bachelor of Education
- **MYTHRI SCHOOL OF NURSING**
  mythrinursinggroup@gmail.com
- Course Offered: Diploma in Nursing
- **MYTHRI COLLEGE OF NURSING**
  mythrinursinggroup@gmail.com
  Course Offered: B.Sc., Nursing and Pc.B.Sc.,

**From :** **To :** BOOK-POST

**Kumadvathi College of Education** -----------------------------------------------------------
Shivamogga Road, Shikaripura – 577427 -----------------------------------------------------------
Shivamogga District, Ph: 08187 – 222383 -----------------------------------------------------------